ದಿಃ 13-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ. ವಿ ಜಿ ವಾದಿ ಪರ ವಕೀಲರಿಂದಃ

ನನ್ನ ಸಾಕ್ಷಿ ಹೇಳಿಕೆಯ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿನಾಂಕ 15-06-2006 ರ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯು ನಿಪಿ-1 ರಲ್ಲಿರುವ ಪ್ರತಿವಾದಿ 1 ಮತ್ತು 2 ರವರ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸದರಿ 2 ನೇ ಪ್ರತಿವಾದಿಯ 2 ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ನಿಪಿ-1 ರಲ್ಲಿ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 (ಸಿ) ಮತ್ತು ನಿಪಿ-1 (ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪತ್ರ ಬರಹಗಾರರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಇ) ಎಂದು ಗುರುತಿಲಾಯಿತು. ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ತಂದೆಯ 2 ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ-1ೃಎಫ್) ಮತ್ತು ನಿಪಿ-1(ಜಿ) ಎಂದು ಗುರುತಿಸಲಾಯಿತು.

ಸರ್ವೆ ನಂಬರ್ 68/4 ರ ಮತ್ತು 68/1 ರ 2 ಪಹಣಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-2 ಮತ್ತು ನಿಪಿ-3 ಎಂದು ಕ್ರಮವಾಗಿ ಗುರುತಿಸಲಾಯಿತು.

ದಿನಾಂಕ 23-06-2014 ರಂದು ವಕೀಲರ ಮೂಲಕ ಕಳುಹಿಸಿದ ತಿಳುವಳಿಕೆ ಪತ್ರದ ಕಛೇರಿಯ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

2 ಅಂಚೆ ರಶೀದಿಗಳನ್ನು ಹಜಾರು ಪಡಿಸಿದ್ದು ಅವುಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಕ್ರಮವಾಗಿ ಗುರುತಿಸಲಾಯಿತು.

2 ಅಂಚೆ ಸ್ವೀಕೃತಿ ಲಕೋಟೆಗಳನ್ನು ಹಜಾರುಪಡಿಸಿದ್ದು ಅವುಗಳನ್ನು ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು.

ದಿನಾಂಕ 01-07-2014 ರಂದು ಪ್ರತಿವಾದಿಯು ವಾದಿಯ ವಕೀಲರಿಗೆ ಕಳುಹಿಸಿದ ಪ್ರತ್ಯುತ್ತರ ಪತ್ರವನ್ನು ನಿಪಿ-9 ಎಂದು ಗುರುತಿಸಲಾಯಿತು ಮತ್ತು ಅದಕ್ಕೆ ಸಂಬಂಧಿಸಿದ ಅಂಚೆ ಕವರ್ ಅನ್ನು ನಿಪಿ-10 ಎಂದು ಗುರುತಿಸಲಾಯಿತು.

ದಿನಾಂಕ 14-05-2014 ರ ಶುದ್ಧ ಕ್ರಯ ಪತ್ರದ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಹಾಗೂ ದಾಸ್ತಾಮೇಗಳನ್ನು ಪರಿಶೀಲಿಸಿ ನನ್ನ ದಾವೆಯನ್ನು ಪುರಸ್ಕರಿಸಿ ನನ್ನ ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಕೋರುತ್ತೇನೆ.

(ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು